**ಸಾಕ್ಷಿಯನ್ನು ದಿಃ 08.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ-**

ನಿಪಿ. 1 ರ ಜಿ.ಪಿ.ಎ ಪ್ರತಿಯಲ್ಲಿರುವ ಸಂಪೂರ್ಣ ಮಾಹಿತಿ ನನಗೆ ಇದೆ. ನಿಪಿ. 18 ರ 65 ಬಿ ಪ್ರಮಾಣ ಪತ್ರ ಬರೆದುಕೊಡಲು ಜಿ.ಪಿ.ಎ ನಲ್ಲಿ ಅಧಿಕಾರ ಕೊಟ್ಟಿಲ್ಲ ಎಂದರೆ ಸಾಕ್ಷಿ ವಕೀಲರು ಹೇಳಿದ ಮೇರೆಗೆ ಸದರಿ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ. 18 ರ ಪ್ರಮಾಣ ಪತ್ರಿಕೆಯಲ್ಲಿ ಇರುವ ಸಹಿ ನನ್ನದೆ ಇರುತ್ತದೆ. ಅದರಲ್ಲಿ ಬರೆದಿರುವುದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಿಪಿ. 8 ರಿಂದ 17 ರ ಪೋಟೋಗಳನ್ನು ಹಾಜರುಪಡಿಸುವಂತೆ ನಿಪಿ. 1 ರ ಜಿ.ಪಿ.ಎ ನಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಶುಲ್ಕವನ್ನಾಗಿ ಸುಮಾರು 84 ಸಾವಿರ ಚಿಲ್ಲರೆ ಕಟ್ಟಿರುತ್ತೇನೆ. ನಿಖರವಾಗಿ ಗೊತ್ತಿಲ್ಲ. ಕ್ರಯದ ಮೊಬಲಗು 14,50,000/- ರೂ. ಗಳಿಗೆ ಕಾನೂನು ಬದ್ಧವಾಗಿ ಎಷ್ಟು ನ್ಯಾಯಾಲಯದ ಶುಲ್ಕವನ್ನು ಕಟ್ಟಬೇಕೆಂದು ನನಗೆ ಗೊತ್ತಿಲ್ಲ. ನಾನು ಕಟ್ಟಿರುವ ನ್ಯಾಯಾಲಯದ ಶುಲ್ಕ ರೂ. 84,125/-ಎಂದರೆ ಸರಿ. ಕಾನೂನು ಪ್ರಕಾರ ಸದರಿ ಕ್ರಯದ ಮೊಬಲಗು 14,50,000/- ರೂ. ಗಳಿಗೆ ನ್ಯಾಯಾಲಯದ ಶುಲ್ಕ ರೂ. 84,625/- ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಾನೂನು ಬದ್ಧವಾಗಿ ನ್ಯಾಯಾಲಯದ ಶುಲ್ಕವನ್ನು ಕಟ್ಟಿಲ್ಲದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿ ಹಾಗೆ ಕಡಿಮೆ ಇದ್ದರೆ ನಾನು ಕಟ್ಟುತ್ತೇನೆ ಎಂದು ನುಡಿಯುತ್ತಾರೆ.

ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳಲ್ಲಿ ಕ್ರಯ ಪತ್ರ ಬರೆದುಕೊಡುವಂತೆ ಹಲವಾರು ಬಾರಿ ನಾನೆ ಕೇಳಿರುತ್ತೇನೆ. ಆ ಬಗ್ಗೆ ದಾವೆಯಲ್ಲಿ, ಹಾಗೂ ಲೀಗಲ್ ನೊಟೀಸ್ ನಲ್ಲಿ ಹೇಳಿರುತ್ತೇನೆ. ಆ ರೀತಿ ನಾನು ಬರೆಸಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಗ್ರಿಮೆಂಟ್ ಆದ ನಂತರ 2016,2017 ರಲ್ಲಿ ಸುಮಾರು ಬಾರಿ ಕೇಳಿರುತ್ತೇನೆ. 2022 ನೇ ಸಾಲಿನಲ್ಲಿ ನೊಟೀಸು

ಕೊಡುವ ಮೂಲಕ ಕ್ರಯಪತ್ರ ಬರೆದುಕೊಡುವಂತೆ ಕೇಳಿರುತ್ತೇನೆ. ಹಾಗೆ ಕ್ರಯಪತ್ರ ಬರೆದುಕೊಡುವಂತೆ 1 ಮತ್ತು 3 ನೇ ಪ್ರತಿವಾದಿಯರನ್ನು ಕೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಮತ್ತು ನೊಟೀಸ್ ನಲ್ಲಿ ಬರೆಸಿ ಹಾಕಿರುತ್ತೇನೆ. ಆ ರೀತಿ ಬರೆಸಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ನೊಟೀಸು ಕೊಡುವ ಕಾಲಕ್ಕೆ ದಾವೆಯಲ್ಲಿನ ಸಂಪೂರ್ಣ ಮಾಹಿತಿ ನನಗೆ ಇತ್ತು. ನಿಪಿ.5 ನೊಟೀಸ್ ನಲ್ಲಿ ನಾನು ಪ್ರತಿವಾದಿಗಳನ್ನು ಕ್ರಯಪತ್ರ ಬರೆದುಕೊಡುವಂತೆ ಮೇಲೆ ಹೇಳಿದ ವರ್ಷಗಳನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.

ನಿಪಿ.5 ರ ಲೀಗಲ್ ನೊಟೀಸ್ ನಲ್ಲಿ ಸ್ವತ್ತಿನ ಸ್ವಾಧೀನ ಕೊಟ್ಟ ಬಗ್ಗೆ ಯಾವ ದಾಖಲೆ ನೋಡಿ ಬರೆದಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ 1 ನೇ ಪ್ರತಿವಾದಿ ಆ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಸಹಿ ಮಾಡಿದ 1 ಲೆಟರ್ ಕೊಟ್ಟಿದ್ದರು ಎನ್ನುತ್ತಾರೆ. ಸಾಕ್ಷಿ ಪುನಃ ಅವರು ಕುಟುಂಬದವರ ಸಹಿ ಪಡೆದು ಲೆಟರ್ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನೊಟೀಸ್ ನಲ್ಲಿ ಬರೆಸಿ ಹಾಕಿರುತ್ತೇನೆ. ನಿಪಿ. 5 ರ ಲೀಗಲ್ ನೊಟೀಸ್ ನ 2 ನೇ ಪುಟದಲ್ಲಿ ಆ ರೀತಿ ಬರೆಸಿ ಹಾಕಿರುತ್ತೇನೆ. ಹಾಗೆ ಬರೆದುಕೊಟ್ಟಿದ್ದ ಲೆಟರ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಲಯಕ್ಕೆ ಕೊಡಲು ನನಗೆ ಯಾವುದೆ ತೊಂದರೆ ಇಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.